ಕೀಟ ನಿರ್ವಹಣೆಗೆ ಸ್ಮಾರ್ಟ್ ತಂತ್ರಜ್ಞಾನ

ಬೆಂಗಳೂರು: ಸ್ಮಾರ್ಟ್‌ಫೋನ್ ಆಧಾರಿತ ಕೀಟ ನಿರ್ವಹಣಾ ವ್ಯವಸ್ಥೆ Wadhwani AI:cotton Ace ಅನ್ನು ಅಳವಡಿಸಿಕೊಳ್ಳಲು ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ಸಂಸ್ಥೆಯೊಂದಿಗೆ ರಾಜ್ಯ ಸರ್ಕಾರ ಒಡಂಬಡಿಕೆ ಮಾಡಿಕೊಂಡಿದೆ.



ಕೃಷಿ ಸಚಿವ ಬಿ.ಸಿ.ಪಾಟೀಲ ಸಮ್ಮುಖದಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಈ ಒಡಂಬಡಿಕೆಯಿಂದ 2023-24ನೇ ಸಾಲಿನಲ್ಲಿ ಹತ್ತಿ ಬೆಳೆಯುವ ರೈತರು ಯಾವುದೇ ಖರ್ಚಿಲ್ಲದೆ ಬೆಳೆಗೆ ಪ್ರಮುಖವಾಗಿ ಕಾಡುತ್ತಿರುವ ಗುಲಾಬಿ ಕಾಯಿ ಕೊರಕ ಹಾಗೂ ಅಮೆರಿಕನ್ ಕಾಯಿ ಕೊರಕಗಳ ಹಾನಿ ಬಗ್ಗೆ ತಿಳಿದುಕೊಂಡು ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ರೈತರು ಬೆಳೆಗಳಿಗೆ ಕಾಡುವ ಕೀಟ/ರೋಗಗಳನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ನಿಖರವಾಗಿ ಗುರುತಿಸುವ ಮೂಲಕ ಆಗಬಹುದಾದ ಹೆಚ್ಚಿನ ಹಾನಿ ತಪ್ಪಿಸುವ ನಿಟ್ಟಿನಲ್ಲಿ ಮೆ.ನ್ಯಾಷನಲ್ ಎಂಟರ್‌ಪ್ರನರ್‌ಷಿಪ್ ನೆಟ್‌ವರ್ಕ್ ಸಂಸ್ಥೆ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಅಳವಡಿಸಿಕೊಳ್ಳಲು ಕ್ರಮ ಕೈಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

16-02-2023
Vijayavani Pg 01

ಕೇಂದ್ರ ಸಂಪುಟ ಸಭೆ ಒಪ್ಪಿಗೆ | ಹೈನುಗಾರಿಕೆಗೆ ಉತ್ತೇಜನ

2 ಲಕ್ಷ ಸಹಕಾರ ಸಂಘ ಸ್ಥಾಪನೆ

■ ವಿಜಯವಾಣಿ ಸುದ್ದಿಜಾಲ ನವದೆಹಲಿ

ಸಹಕಾರ ಚಳವಳಿಯನ್ನು ಇನ್ನಷ್ಟು ಬಲಪಡಿಸಿ ತಳಮಟ್ಟಕ್ಕೆ ವಿಸ್ತರಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಕೇಂದ್ರ ಸಚಿವ ಸಂಪುಟ ಮುಂದಿನ ಐದು ವರ್ಷಗಳಲ್ಲಿ 2 ಲಕ್ಷ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಪಿಎಸಿಎಸ್) ಮತ್ತು ಹೈನುಗಾರಿಕೆ-ಮೀನುಗಾರಿಕೆ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದೆ. ಇಂತಹ ಸಹಕಾರಿ ಸಂಘಗಳನ್ನು ಈವರೆಗೂ ಹೊಂದಿಲ್ಲದ ಗ್ರಾಮ ಮತ್ತು ಪಂಚಾಯ್ತಿಗಳಲ್ಲಿ ಪಿಎಸಿಎಸ್‌ಗಳನ್ನು ಸ್ಥಾಪಿಸಲಾಗುತ್ತದೆ.



ದೇಶದಲ್ಲಿ ಪ್ರಸ್ತುತ ಅಂದಾಜು 63,000 ಪಿಎಸಿಎಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಪ್ರಾಥಮಿಕ ಕೃಷಿ ಸಹಕಾರ ಸಂಘ, ಡೇರಿ ಸಹಕಾರ ಸಂಘ ಹಾಗೂ ಪ್ರತಿ ಕರಾವಳಿ ಮತ್ತು ದೊಡ್ಡ ಪ್ರಮಾಣದ ಜಲಮೂಲಗಳನ್ನು ಹೊಂದಿರುವ ಪಂಚಾಯ್ತಿ/ಗ್ರಾಮಗಳಲ್ಲಿ ಮೀನುಗಾರಿಕಾ ಸಹಕಾರ ಸಂಘಗಳನ್ನು ಸ್ಥಾಪಿಸಲು ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ.

ರೈತರ ಆದಾಯಗಳನ್ನು ಹೆಚ್ಚಿಸಲು ಈ ಕ್ರಮ ನೆರವಾಗಲಿದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಸಿಂಗ್ ಠಾಕೂರ್ ಹೇಳಿದ್ದಾರೆ. ಕಳೆದ ವರ್ಷದ ಜೂನ್‌ನಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಪಿಎಸಿಎಸ್‌ನ ದಕ್ಷತೆ ಹೆಚ್ಚಿಸಲು ಮತ್ತು ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆಯನ್ನು ತರಲು ಸಂಘಗಳ ಕಂಪ್ಯೂಟರೀಕರಣಕ್ಕೆ ಅನುಮೋದನೆ ನೀಡಿತ್ತು. ಅಂದಾಜು 63,000 ಪಿಎಸಿಎಸ್‌ಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಒಟ್ಟು 2,516 ಕೋಟಿ ರೂ. ವೆಚ್ಚದ ಯೋಜನೆಯಲ್ಲಿ 1,528 ಕೋಟಿ ರೂ. ಕೇಂದ್ರದ ಪಾಲುದಾರಿಕೆ ಇರಲಿದೆ.

16-02-2023
Vijayavani Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

ಅಣಬೆ-ಸಿರಿಧಾನ್ಯ ಮಿಶ್ರಿತ ಬಿಸ್ಕೆಟ್‌ಗಳು, ಹೂ ತ್ಯಾಜ್ಯದಿಂದ ಊದುಬತ್ತಿ, ಲಂಬ ಕೃಷಿ ಪದ್ಧತಿಯ ತರಕಾರಿ ಆಕರ್ಷಣೆ

22 ರಿಂದ ರಾಷ್ಟ್ರೀಯ ತೋಟಗಾರಿಕೆ ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

ಈ ಬಾರಿ ಫೆ.22 ರಿಂದ ನಾಲ್ಕು ದಿನಗಳ ಕಾಲ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಆವರಣದಲ್ಲಿ ನಡೆಯುವ ರಾಷ್ಟ್ರೀಯ ತೋಟಗಾರಿಕೆ ಮೇಳ ಹಲವು ವೈವಿಧ್ಯತೆಗಳಿಂದ ಕೂಡಿದ್ದು, ಹತ್ತಾರು ಹೊಸ ತಳಿಗಳು, ತಂತ್ರಜ್ಞಾನಗಳು ರೈತರನ್ನು ಸೆಳೆಯಲು ಸಜ್ಜಾಗಿವೆ.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ಮೇಳವನ್ನು ಸರಳವಾಗಿ ನಡೆಸಲಾಗಿತ್ತು. ಈ ಬಾರಿ ಅದ್ಧೂರಿಯಾಗಿ ನಡೆಸಲಾಗುವುದು. 'ಸ್ವಾವಲಂಬನೆಗಾಗಿ ನವೀನ ತೋಟಗಾರಿಕೆ' ಥೀಮ್ ನಡಿ ಮೇಳ ನಡೆಯಲಿದೆ. 120ಕ್ಕೂ ಹೆಚ್ಚು ತಳಿಗಳು, 63 ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಇರಲಿದೆ. 250ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗುತ್ತಿದೆ. ಹಲವು ಸ್ಟಾರ್ಟಪ್‌ಗಳು ಮೇಳದಲ್ಲಿ ಗಮನಸೆಳೆಯಲಿದ್ದು, ಪ್ರತಿನಿತ್ಯ ಸುಮಾರು 30 ಸಾವಿರಕ್ಕೂ ಹೆಚ್ಚು ರೈತರು ಹಾಗೂ ನೋಡುಗರು ಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ ಎಂದು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಸಂಸ್ಥೆಯು ಇತ್ತೀಚೆಗೆ ಬಿಡುಗಡೆ ಮಾಡಿದ ಹಣ್ಣು, ತರಕಾರಿ, ಹೂವು ಹಾಗೂ ಔಷಧೀಯ ಬೆಳೆ ತಳಿಗಳ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಗುತ್ತದೆ. ಈವರೆಗೆ ಐದು ಮೇಳ ಯಶಸ್ವಿಯಾಗಿಸಿದ್ದು, ಇದು ಆರನೇ ಮೇಳವಾಗಿದೆ.

ಲಂಬ ಕೃಷಿ ಪದ್ಧತಿಯಲ್ಲಿ ಸಮೃದ್ಧ ಹೂ ಬೆಳೆ: ಕಡಿಮೆ ಜಾಗದಲ್ಲಿ ಸಮೃದ್ಧವಾದ ಬೆಳೆ ತೆಗೆದು, ಲಾಭ ಮಾಡಿಕೊಳ್ಳಲು ಅನುಕೂಲವಾಗುವಂತೆ ಲಂಬ ಕೃಷಿ ಪದ್ಧತಿಯನ್ನು ಐಐಎಚ್‌ಆರ್‌ನಲ್ಲಿ ಈ ಬಾರಿ ಪರಿಚಯಿಸಲಾಗಿದೆ. ಪಾಲಿಹೌಸ್‌ನಲ್ಲಿ 12 ಅಡಿ ಲಂಬವಾದ ಜಾಗ ಬಳಸಿಕೊಂಡು ಆರು ಪಟ್ಟು ಇಳುವರಿ ಪಡೆಯಹುದಾದ ವ್ಯವಸ್ಥೆ ಇದಾಗಿದೆ. ಜರ್ಬೆರಾ, ಗ್ಲಾಡಿಯೋಲಸ್, ಬೀನ್ಸ್, ಹೂಕೋಸು, ಎಲೆಕೋಸು ಸೇರಿದಂತೆ ಹಲವು ಹೂವು, ತರಕಾರಿ ಬೆಳೆಗಳನ್ನು ಈ ವಿಧಾನದಲ್ಲಿ ಬೆಳೆಯಬಹುದು. ಕೋಕೊಪಿಟ್ ತುಂಬಿದ ಬೃಹತ್ ಬ್ಯಾಗ್‌ಗಳನ್ನು ಸ್ಟ್ಯಾಂಡ್‌ಗೆ ಅಳವಡಿಸಿ, ಬತ್ತಿ ನೀರಾವರಿ ವ್ಯವಸ್ಥೆಯಲ್ಲಿ ಉತ್ತಮ ಬೆಳೆ ತೆಗೆಯಬಹುದು. (ಒಂದು ಸ್ಟ್ಯಾಂಡ್‌ಗೆ 25 ಸಾವಿರ ರೂ. ಖರ್ಚು ಮಾಡಿದರೆ, ಸುಮಾರು 10 ವರ್ಷದವರೆಗೆ ಬಳಸಬಹುದು.) ಈ ವಿಧಾನದ ಬೆಳೆಗೆ ಸಬ್ಸಿಡಿ ಸಿಕ್ಕರೆ ರೈತರು ಹೆಚ್ಚಿನ ಪ್ರಮಾಣದಲ್ಲಿ ಇದರ ಲಾಭ ಪಡೆಯಬಹುದು. ಹೀಗಾಗಿ, ಕೇಂದ್ರ ಸರಕಾರದ ಎಂಐಡಿಎಚ್‌ಗೆ ಶಿಫಾರಸು ಮಾಡಲಾಗಿದೆ ಎಂದು ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿ ಡಾ. ಆಶ್ವತ್ಥ್ ತಿಳಿಸಿದರು.

ಹೂವಿನ ತ್ಯಾಜ್ಯದಿಂದ ಅಗರಬತ್ತಿ: ಹೂವಿನ ತ್ಯಾಜ್ಯದಿಂದ ಅಗರಬತ್ತಿ ತಯಾರಿಸಲು ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ಈ ಸಂಬಂಧ ಆಸಕ್ತರಿಗೆ ತರಬೇತಿಯನ್ನೂ ನೀಡಲು ಐಐಎಚ್‌ಆರ್ ಮುಂದಾಗಿದೆ. ಇದರ ಬಗೆಗೂ ತೋಟಗಾರಿಕೆ ಮೇಳದಲ್ಲಿ ಪ್ರಾತ್ಯಕ್ಷಿಕೆಯಿರುತ್ತದೆ.



ಬ್ರೆಜಿಲ್ ತೋಟಗಾರಿಕೆ ಉತ್ಪನ್ನಗಳನ್ನು ಹೆಚ್ಚು ಬೆಳೆಯುವ ಮೂಲಕ ಮೊದಲ ಸ್ಥಾನದಲ್ಲಿತ್ತು. ಇದೀಗ ಸುಮಾರು ಒಂದು ದಶಕದಿಂದ ಬ್ರೆಜಿಲ್ ಅನ್ನು ಹಿಂದಿಕ್ಕಿ ಭಾರತ ಮುಂಚೂಣಿ ಸ್ಥಾನವನ್ನು ಪಡೆದುಕೊಂಡಿದೆ.
-ಡಾ. ಸಂಜಯ್‌ಕುಮಾರ್ ಸಿಂಗ್ ನಿರ್ದೇಶಕರು, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ





ಅಣಬೆ, ಸಿರಿಧಾನ್ಯ ಬಿಸ್ಕೆಟ್

ಅಣಬೆ ಮತ್ತು ನಾನಾ ಸಿರಿ ಧಾನ್ಯಗಳಾದ ಜೋಳ, ಸಜ್ಜೆ ಮತ್ತು ಸಾಮೆ ಬಳಸಿ ಪೋಷಕಾಂಶ ಭರಿತ ಬಿಸ್ಕೆಟ್‌ಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಐಐಎಚ್‌ಆರ್‌ನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಉತ್ಪನ್ನಗಳು ಮೈದಾ ಮತ್ತು ಸಕ್ಕರೆಯಿಂದ ಮುಕ್ತವಾಗಿದ್ದು, ಶೂನ್ಯ ಸಂರಕ್ಷಕಗಳಿಂದ ತಯಾರಿಸಲಾಗಿದೆ. ಮಾರುಕಟ್ಟೆಯಲ್ಲಿ ಲಭ್ಯ ಇರುವ ಇತರ ಬಿಸ್ಕತ್ತುಗಳಿಗೆ ಹೋಲಿಸಿದರೆ ಇವುಗಳಲ್ಲಿ 13-15ರಷ್ಟು ಹೆಚ್ಚಿನ ಪ್ರೋಟೀನ್ ಅಂಶ, ಅಧಿಕ ಕ್ಯಾಲ್ಶಿಯಂ ಮತ್ತು ಕಡಿಮೆ ಕಾರ್ಬೊಹೈಡ್ರೇಟ್ ಗಳನ್ನು ಹೊಂದಿದೆ.

16-02-2023
V-karantaka Pg 12

16-02-2023
Hosadiganta Pg 08

ಅಡಿಕೆ ಕ್ಯಾನ್ಸರ್‌ಕಾರಕ ಅಲ್ಲ: ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರ್‌ಕುಮಾರ್ ಕೊಡ್ಗಿ

ಅಡಿಕೆ ಸೇವನೆಯಿಂದ ಆರೋಗ್ಯ ಲಾಭ

ಮಂಗಳೂರು: ಅಡಿಕೆ ಕ್ಯಾನ್ಸರ್‌ಕಾರಕವಲ್ಲ ಎಂಬ ಬಗ್ಗೆ ಸಂಶೋಧನೆಗೆ ಕ್ಯಾಂಪ್ಕೊ ಸಂಸ್ಥೆ ನಿಟ್ಟೆ ಪರಿಗಣಿಸಲ್ಪಟ್ಟ ವಿಶ್ವವಿದ್ಯಾಲಯ ಜತೆ ಒಪ್ಪಂದ ಮಾಡಿಕೊಂಡಿದ್ದು, ಅಡಿಕೆ ಕ್ಯಾನ್ಸರ್‌ಕಾರಕ ಅಲ್ಲ ಎಂಬ ಅಂಶ ಎರಡು ವರ್ಷದ ಸಂಶೋಧನೆಯ ಮೊದಲ ವರದಿಯಲ್ಲಿ ಉಲ್ಲೇಖವಾಗಿದೆ. ಇದೇ ವರದಿಯನ್ನು ಸುಪ್ರೀಂಕೋರ್ಟ್ ಗಮನಕ್ಕೂ ತರಲಾಗುವುದು ಎಂದು ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರ್‌ಕುಮಾರ್ ಕೊಡ್ಗಿ ತಿಳಿಸಿದರು.

ಕ್ಯಾಂಪ್ಕೊ ಕೇಂದ್ರ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಅಡಿಕೆ ಸೇವನೆಯಿಂದ ಆರೋಗ್ಯ ಲಾಭ ಇದೆ ಎಂಬ ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯದ ಸಂಶೋಧನಾ ವರದಿ ಹಿನ್ನೆಲೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ವಿಧಾನಪರಿಷತ್‌ನಲ್ಲಿ ನೀಡಿದ ಹೇಳಿಕೆ ಸರಿ ಇದೆ. ಅಡಿಕೆ ಕ್ಯಾನ್ಸರ್‌ಕಾರಕ ಎಂಬ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ದಾವೆಗೆ ಪ್ರತಿಯಾಗಿ ಇವರೆಡೂ ಸಂಶೋಧನಾ ವರದಿಯನ್ನು ಸುಪ್ರೀಂಕೋರ್ಟ್ ಮುಂದಿಡಬಹುದು ಎಂದರು.

ಬೆಳೆಗಾರರು ಅಡಿಕೆ ತೋಟದಲ್ಲಿ ಮಿಶ್ರ ಬೆಳೆ ಬೆಳೆಸಲು ಹೆಚ್ಚಿನ ಆದ್ಯತೆ ನೀಡಬೇಕು. ಮುಖ್ಯವಾಗಿ ರೋಗರಹಿತವಾಗಿ ಮಿಶ್ರ ಬೆಳೆಯಲ್ಲಿ ಯಶಸ್ಸು ಕಾಣಲು ಔಷಧೀಯ ಸಸ್ಯಗಳನ್ನು ಬೆಳೆಸಲು ಬೆಳೆಗಾರರು ಮುಂದೆ ಬರಬೇಕು. ಕ್ಯಾಂಪ್ಕೊ ಮೂಲಕ ಔಷಧೀಯ ಸಸ್ಯಗಳನ್ನು ಬೆಳೆಯಲು ಪೂರಕವಾಗಿ ಕ್ಯಾಂಪ್ಕೊ ಬೈಲಾಕ್ಕೂ ತಿದ್ದುಪಡಿ ತರುವ ಚಿಂತನೆಯಿದೆ. ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆ ಏರಿಳಿತವಾಗುತ್ತಿದೆ. ಅಡಿಕೆ ಮಾರುಕಟ್ಟೆ ಧಾರಣೆಯಿಂದಾಗಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅಡಿಕೆ ತೋಟ ವಿಸ್ತರಣೆಯಾಗುತ್ತಿದೆ. ಈಗ ಬೆಂಗಳೂರು ನಗರ ಪ್ರದೇಶವನ್ನೂ ಅಡಿಕೆ ತೋಟ ಪ್ರವೇಶಿಸಿದೆ. ಇದನ್ನು ನಿಯಂತ್ರಿಸಲು ಕ್ಯಾಂಪ್ಕೊದಿಂದ ಸಾಧ್ಯವಿಲ್ಲ. ಸರಕಾರಮಟ್ಟದಲ್ಲಿ ಕ್ರಮಕೈಗೊಳ್ಳಬಹುದು. ಬೆಳೆಗಾರರೇ ಅರಿತುಕೊಂಡರೆ ಉತ್ತಮ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಅಡಿಕೆ ಬೆಳೆ ವಿಪರೀತ ಹಂತಕ್ಕೆ ತಲುಪಿದರೂ ಅಚ್ಚರಿ ಇಲ್ಲ. ಆಗ ಅಡಿಕೆ ಧಾರಣೆ ಮೇಲೆ ದುಷ್ಪರಿಣಾಮ ಉಂಟಾಗಬಹುದು. ಆದಕ್ಕಾಗಿ ಅಡಿಕೆ ಬೆಳೆ ಜತೆ ಔಷಧೀಯ ಸಸ್ಯಗಳನ್ನು ಬೆಳೆಸುವ ಬಗ್ಗೆ ಗಮನ ಹರಿಸುವಂತೆ ಆಡಳಿತ ಮಂಡಳಿ ಕೂಡ ನಿರ್ಧಾರ ತಳೆಯಲಿದೆ ಎಂದರು.

ಔಷಧೀಯ ಸಸ್ಯಗಳಿಗೆ ಸುಲಭದಲ್ಲಿ ರೋಗ ಬರುವುದಿಲ್ಲ, ಕಾಡುಪ್ರಾಣಿ ಹಾವಳಿ ಇರುವುದಿಲ್ಲ. ಒಂದು ವೇಳೆ ಅಡಿಕೆ ಧಾರಣೆ ಕುಸಿತಕಂಡರೂ ಮಿಶ್ರ ಬೆಳೆ ಕೃಷಿಕರ ಕೈ ಹಿಡಿಯುತ್ತದೆ. ಪ್ರಸಕ್ತ ಕರಾವಳಿ ಅಡಿಕೆ ತೋಟಗಳಲ್ಲಿ ಕೋಕೋ ಬೆಳೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಚಾಕಲೇಟ್‌ಗೆ ಬೇಕಾದಕೋಕೋಪೌಡರ್‌ನ್ನು ಆಂಧ್ರಪ್ರದೇಶದಿಂದ ತರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕರಾವಳಿ ಬದಲು ಬಯಲುಸೀಮೆಗಳಲ್ಲಿ ಕೋಕೋ ಬೆಳೆಸಲು ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ ಎಂದರು.

ಪುತ್ತೂರಿನಲ್ಲಿರುವ ಕ್ಯಾಂಪ್ಕೋ ಚಾಕಲೇಟ್ ಫ್ಯಾಕ್ಟರಿ ಈಗ ಶೇ.70ರಷ್ಟು ವಿದ್ಯುತ್ ಬಳಕೆಯಲ್ಲಿ ಸ್ವಾವಲಂಬಿಯಾಗಿದೆ. ಸೋಲಾರ್ ವಿದ್ಯುತ್ ಬಳಕೆಗೆ ಪಾವಗಡ ಅಥವಾ ಚಿತ್ರದುರ್ಗ ಘಟಕದ ಜತೆ 25 ವರ್ಷ ಅವಧಿಗೆ 25 ಲಕ್ಷ ಯುನಿಟ್‌ಗೆ ಒಪ್ಪಂದ ಮಾಡಿಕೊಳ್ಳಲಿದೆ. ಇದರಿಂದಾಗಿ ಪ್ರತಿ ಯೂನಿಟ್‌ಗೆ 2ರಿಂದ 2.30 ರೂ ವರೆಗೆ ಮೊತ್ತ ಉಳಿತಾಯವಾಗಲಿದೆ ಎಂದರು.

ರಬ್ಬರ್ ಬೆಲೆ ಸ್ಥಿರತೆಗೆ ಪತ್ರ

ರಬ್ಬರ್ ಬೆಲೆ ಸ್ಥಿರತೆಗೆ ಸಂಬಂಧಪಟ್ಟವರಿಗೆ ಕ್ಯಾಂಪ್ಕೊ ವತಿಯಿಂದ ಪತ್ರ ಬರೆಯಲಾಗಿದೆ. ಕ್ಯಾಂಪ್ಕೊ ವತಿಯಿಂದ ಬಾಳೆಕಾಯಿ ಚಿಪ್ಸ್ ಮಾರಾಟ ಮಾಡುವ ಬಗ್ಗೆ ಬಾಳೆ ಬೆಳೆಗಾರರಿಂದ ಸಲಹೆ ಬಂದಿದೆ. ಕ್ಯಾಂಪ್ಕೊ ಬ್ರಾ್ಯಂಡ್‌ನಲ್ಲಿ ಬಾಳೆಕಾಯಿ ಚಿಪ್ಸ್ ಮಾರಾಟ ಮಾಡುವ ಚಿಂತನೆಯಿದೆ. ಅಡಿಕೆ ಎಲೆಚುಕ್ಕಿ ಹಾಗೂ ಎಲೆ ಹಳದಿ ರೋಗ ನಿಯಂತ್ರಣ ಹಾಗೂ ಶಾಶ್ವತ ಪರಿಹಾರಕ್ಕೆ ಖಾಸಗಿ ವಿಜ್ಞಾನಿಗಳ ಜತೆ ಕೆಲಸ ಮಾಡಲಾಗುವುದು ಎಂದು ಕಿಶೋರ್‌ಕುಮಾರ್ ಕೊಡ್ಗಿ ತಿಳಿಸಿದರು.

On the menu: Mushroom cookie, chutney powder, and rasam powder

IIHR develops value-added products with the aim of inculcating entrepreneurship through the production of these products

The Hindu Bureau
BENGALURU

Fancy a mushroom cookie, health drink, chutney powder or rasam powder? The Indian Institute of Horticultural Research (IIHR) in Hesaraghatta has developed five kinds of mushroom millet cookies and various value-added products from mushrooms aimed at inculcating entrepreneurship through the production of these products.

The 'Arka mushroom millet cookies' technology uses dry elm oyster mushroom (Hypsizygus ulmarius) powder in combination with five different millet flours (sorghum or jowar, pearl millet or bajra, corn or maize, finger millet or ragi and little millet or sawai) for the production of mushroom millet cookies. IIHR officials said this is the first of its kind to be developed since mushrooms and millets are well known for their culinary medicinal properties.

"Mushrooms are a novel horticultural crop gaining importance and also are a very good source of protein, fibre, iron, vitamins B and D, potassium, phosphorus, selenium and copper. They also contain polysaccharides and antioxidant ergothioneine, which are immune stimulators and anticancer agents," Chandrashekara C, Senior Scientist, from IIHR said.

"At the same time, it is good for diabetics and heart patients due to their low energy, very low fat, no sugar, and ability to reduce cholesterol and triglycerides. These cookies and value-added products will increase the consumption of mushrooms, and also the cultivation of the mushrooms will increase and benefit the farmers," the scientist said.



One of the five kinds of mushroom millet cookies developed by the Indian Institute of Horticultural Research in Hesaraghatta on the outskirts of Bengaluru.
SPECIAL ARRANGEMENT

On the occasion of the International Year of the Millet this year, the IIHR is also giving importance to mushroom products using millets. "Millets are again regaining their importance as a staple food source due to their varied nutritional potential. Blended or combination food or products can be an important way to diversify the food plate and obtain balanced nutrition. Development of mushroom millet cookies is a step towards blending the nutritional goodness of mushrooms and millets for better taste and nutrition," he explained.

16-02-2023
Hindu Pg 04

Guj: Rarest element used in cancer therapy extracted from mushrooms

Nimesh Khakhariya | TNN

Rajkot: Mushrooms grown in India's largest district Kutch can potentially provide the key chemical element for an emerging radiation therapy given to cancer patients. Scientists at Gujarat Institute of Desert Ecology (GUIDE) and Kutch university have successfully extracted astatine, the rarest naturally occurring element on the earth, from edible mushrooms.

Astatine, which is not just rare but also has an extremely short life, is said to cause minimal side-effects that come with chemotherapy. Scientists say the availability of astatine on earth is just a few grams as this radioactive element decays within hours. V Vijay Kumar, director, GUIDE, said: "Cobalt radiation is used in chemotherapy for cancer treatment. But cobalt remains inside the body for a longer time and damages cancer cells as well as the healthy ones, which results in side-effects. Astatine only targets cancer cells and gets deactivated after some time, thus causing minimal damage to the body."

Photo for representation



KEY CHEMICAL ELEMENT

The common side-effects of chemotherapy are hair loss, weakness, nausea and vomiting, blood clots and memory loss, among others. As cobalt remains in the body for a long time, the gap between two chemotherapy sessions is also more.

GUIDE has successfully cultivated edible as well as medical mushrooms in recent times. The scientists gave some edible mushrooms for laboratory evaluation to the chemistry department of Kutch university, which has highly sophisticated, high-end equipment.

According to Vijay Ram, assistant professor of the chemistry department, during testing, "the rarest of the rare element", was found. "We confirmed the presence of astatine and informed GUIDE," he said.

16-02-2023
Times of India Pg 08

16-02-2023
Times of India Pg 09

Cereal inflation broad-based and worrying, say economists

Reuters
MUMBAI

The soaring prices of cereals such as wheat and rice are a concern for the Indian economy even though the latest set of inflation data may overstate the extent of the increase, economists said.

Inflation in the cereals category hit 16.1% in January compared to 13.7% in December, data released on Monday show. Alongside cereals, rising prices of protein items like milk, eggs and meat pushed up food and beverages inflation to 6.2% in January.



Besides their effect on rates, elevated food prices will be a burden in India's rural areas, where disposable income is low and wage hikes have not kept pace with the rise in inflation.

"Higher inflation in more heavily weighted components such as staple cereals and proteins was worrying," said Dhiraj Nim, an economist at ANZ Research. Mr. Nim said the persistently high wheat and rice prices – despite the government's steps such as curbing wheat exports – had led to inflation in items which use these staples as key inputs.

"The three-month moving average inflation rates for items like biscuits, bread, refined flour, and semolina have been substantially higher than their latest 3-year average inflation rates," he said.

"Cereal inflation, in short, has become broad-based, which is concerning."

Foodgrain output set to hit record 324 MT in 2022-23

Vishwa.Mohan@timesgroup.com

New Delhi: India is likely to produce nearly 324 million tonnes (MT) of foodgrains in the 2022-23 crop year (July-June), a new record and higher by around 8 MT (2.5%) than the output in the previous crop year.

The increase is mainly backed by the all-time record production of paddy (131 MT), wheat (112 MT) and pulses (28 MT). High-priority millets could not match the increased attention with bajra recording only marginal increase whereas jowar and ragi reported a decline.

Millets output shows that the farmers continue to prefer paddy (rice) and wheat as current focus of procurement mainly on these two major crops make it an easy choice for them. Overall output of coarse/nutri cereals (53 MT), however, reported an increase in 2022-23 compared to previous year, mainly due to record output of maize and barley.

Second advance estimates of production of major crops, released by the agriculture ministry on Tuesday, showed even record output of certain non-foodgrains including oilseeds and sugarcane. Among oilseeds, mustard recorded an increase of over **7%** this year compared to 2021-22.

Attributing the record output of foodgrains and oilseeds to "hard work of farmers, proficiency of scientists and farmer's friendly policies" of his government, agriculture minister Narendra Singh Tomar hoped that there would be increase in the production and use of coarse/nutri cereals in the coming years.

"It is expected that more and more farmers may switch over to millets during upcoming Kharif season, beginning June, as many states have lined up with incentives to them during the International Year of Millets 2023 in sync with the government's efforts to make India a global hub for millets," said an official in the ministry.

HOW PRODUCTION WENT UP



Million Tonnes (MT); Figures are rounded off; Crop Year: July-June cycle
* 2014-15 and 2015-16 were drought years

16-02-2023
Times of India Pg 08

16-02-2023
Times of India Pg 09

Govt to set up 2L primary agri credit societies across country

Seeks to Make The Cooperative Sector More Broad Based

TIMES NEWS NETWORK

New Delhi: Seeking to make the cooperative sector more broad based in terms of reach and services, the Union cabinet on Wednesday approved a decision to establish two lakh primary agricultural credit societies (PACS) across the country in the next five years. Besides setting up PACS in each uncovered panchayat, new dairy-fishery cooperatives will also be set up in the villages which currently don't have such societies.

Currently, there are 98,995 PACS having a member-base of 13 crore. These societies constitute the lowest tier of the short-term cooperative credit (STCC) structure in the country, providing short-term and medium-term credit and other input services, like seed, fertiliser, pesticide distribution to member farmers.



New dairy-fishery cooperatives will also be set up in the villages which currently don't have such societies

The PACS are refinanced by Nabard through 352 district central cooperative banks (DCCBs) and 34 state cooperative banks (SCBs).

Under the cabinet decision, dairy cooperatives will be set up in each uncovered panchayat/village whereas fishery cooperatives will be established in each coastal panchayat/village. Panchayat/villages having large water bodies will also be covered under the plan. Currently, there are 1,99,182 primary dairy cooperative societies, having around 1.5 crore members; and 25,297 primary fishery cooperative societies, having around 38 lakh members, in the country. The government has constituted a high level inter-ministerial committee (IMC) under the chairmanship of home and cooperation minister Amit Shah to take necessary steps, including suitable modifications in the guidelines of the schemes identified for convergence, for smooth implementation of the plan. Agriculture minister, minister of fishery and dairy, chairman of Nabard, and chief executive of NFDB will be the members of this panel.

The new entities will be established through convergence of various central schemes including the 'Pradhan Mantri Matsya Sampada Yojana' (PMMSY). The action plan for implementation of the project will be prepared by Nabard, National Dairy Development Board (NDDB) and National Fishery Development Board (NFDB).

"The move will enable PACS/dairy/fishery cooperative societies to set up and modernise necessary infrastructure to diversify their business activities. It will also provide farmer members with requisite forward and backward linkages to market their produce, enhance their income, obtain credit facilities and other services at village level," said an official.